ಬೆನ್ನಿಗೆ ಚೂರಿ ಹಾಕುವುದಾಗಲೀ ಅಥವಾ ವಿಷ ಹಾಕುವುದಾಗಲೀ ಮಾಡುವುದಿಲ್ಲ. ಲ್ಯಾಂಗ್ಟನ್ ಬಗ್ಗೆ ನೀನು ಹೇಳುತ್ತಿರುವುದೆಲ್ಲಾ ಸುಳ್ಳು. ಅವನು ಒಂದು ನೊಣವನ್ನೂ ಸಾಯಿಸಲಾರ.'

'ನೊಣಗಳ ಬದುಕಿನ ಬಗ್ಗೆ ನನಗೆ ಕಾಳಜಿಯಿಲ್ಲ' ಪ್ವರೊ ಶಾಂತವಾಗಿ ಹೇಳಿದ. 'ಮಸ್ಯೂರ್ ಲ್ಯಾಂಗ್ಟನ್ ಒಂದು ನೊಣವನ್ನೂ ಸಾಯಿಸಲಾರ ಎಂದು ನೀನೇ ಹೇಳುತ್ತಿದ್ದೀಯಾ. ಆದರೆ, ಸಾವಿರಾರು ಕಣಜಗಳ ಜೀವವನ್ನು ತೆಗೆಯಲು ಅವನೀಗ ಸಿದ್ಧನಾಗುತ್ತಿದ್ದಾನೆ ಎಂಬುದನ್ನು ನೀನು ಮರೆತಿದ್ದೀಯಾ.'

ಹ್ಯಾರಿಸನ್ ಕೂಡಲೇ ಅದಕ್ಕೆ ಉತ್ತರಿಸಲಿಲ್ಲ. ಹರ್ಕ್ಯುಲ್ ಪ್ವರೊ ಕುರ್ಚಿಯಿಂದ ಜಿಗಿದೆದ್ದು ಅವನ ಸ್ನೇಹಿತನ ಬಳಿ ಹೋಗಿ, ಅವನ ಭುಜದ ಮೇಲೆ ಕೈಯನ್ನಿಟ್ಟ. ತಳಮಳಗೊಂಡಿದ್ದ ಹ್ಯಾರಿಸನ್‌ನನ್ನು ಪ್ವರೊ ಅಲ್ಲಾಡಿಸಿ, ಅವನ ಕಿವಿಯೊಳಗೆ ಪಿಸುಗುಟ್ಟಿದ: 'ಏಳು ಮಿತ್ರ, ಎದ್ದೇಳು. ನೋಡು, ನಾನು ಕೈ ತೋರಿಸುತ್ತಿರುವ ಕಡೆ ನೋಡು. ಆ ದಿಣ್ಣೆಯ ಮೇಲೆ, ಮರದ ಬೇರಿನ ಬದಿಯನ್ನು ನೋಡು. ಕಣಜಗಳು ತಮ್ಮ ದಿನವನ್ನು ಮುಗಿಸಿಕೊಂಡು ಗೂಡಿಗೆ ನೆಮ್ಮದಿಯಿಂದ ಮರಳಿ ಬರುತ್ತಿರುವುದು ಕಾಣುತ್ತಿದೆಯಾ? ಇನ್ನು ಸ್ವಲ್ಪ ಸಮಯದಲ್ಲೇ ಅವುಗಳ ಸರ್ವನಾಶವಾಗುತ್ತದೆ. ಆದರೆ, ಅವಕ್ಕೆ ಅದರ ಪರಿವೆಯೇ ಇಲ್ಲ. ಅವುಗಳಿಗೆ ಇದನ್ನು ಹೇಳಲು ಯಾರೂ ಇಲ್ಲ. ಮುನ್ಸೂಚನೆ ಕೊಡಲು ಅವರದ್ದೇ ಆದ ಹರ್ಕ್ಯುಲ್ ಪ್ವರೊ ಅವುಗಳಿಗಿಲ್ಲವೆನಿಸುತ್ತದೆ. ಮಸ್ಯೂರ್ ಹ್ಯಾರಿಸನ್, ನಾನಿಲ್ಲಿಗೆ ಬಂದಿರುವುದು ಕೆಲಸದ ಮೇಲೆಂದು ಮತ್ತೊಮ್ಮೆ ಮನವರಿಕೆ ಮಾಡುತ್ತೇನೆ. ಹತ್ಯೆಯ ತನಿಖೆಯೇ ನನ್ನ ವೃತ್ತಿ. ಕೊಲೆಗೆ ಮುಂಚೆ ಮತ್ತು ನಂತರ ಏನಾಯಿತೆಂದು ಪತ್ತೆ ಹಚ್ಚುವುದೇ ನನ್ನ ಕೆಲಸ. ಈ ಕಣಜದ ಗೂಡನ್ನು ನಾಶ ಮಾಡಲು ಮಸ್ಯೂರ್ ಲ್ಯಾಂಗ್ಟನ್ ಎಷ್ಟು ಗಂಟೆಗೆ ಬರುತ್ತಾನೆ?'

'ಲ್ಯಾಂಗ್ಟನ್ ಎಂದಿಗೂ ಅಂತಹ ಕೆಲಸ...'

'ಎಷ್ಟು ಗಂಟೆಗೆ ಬರುತ್ತಾನೆ ಹೇಳು?'

'ಒಂಬತ್ತು ಗಂಟೆಗೆ. ಆದರೆ, ನೀನು ತಪ್ಪಾಗಿ ತಿಳಿದಿದ್ದೀಯಾ ಎಂದು ಮತ್ತೊಮ್ಮೆ ಹೇಳುತ್ತೇನೆ. 'ಲ್ಯಾಂಗ್ಟನ್ ಎಂದಿಗೂ ಅಂತಹ ಕೆಲಸ...'

'ಈ ಇಂಗ್ಲೀಷರೋ!' ಪ್ವರೊ ಉದ್ವೇಗ ತುಂಬಿದ ಧ್ವನಿಯಲ್ಲಿ ಹೇಳಿದ. ಅವನು ತನ್ನ ಟೋಪಿ ಮತ್ತು ಕೋಲನ್ನು ತೆಗೆದುಕೊಂಡು ಅಂಗಳದಲ್ಲಿ ನಿಂತು ಹೇಳಿದ. 'ಇಲ್ಲಿದ್ದು ನಿನ್ನೊಂದಿಗೆ ವಾದ ಮಾಡುವುದಿಲ್ಲ. ಅದು ನನ್ನನ್ನು ರೇಗಿಸುವುದರ ಹೊರತಾಗಿ ಅದರಿಂದ ಬೇರೆ ಯಾವ ಪ್ರಯೋಜನವೂ ಇಲ್ಲ. ಆದರೆ, ನಾನು ಒಂಬತ್ತು ಗಂಟೆಗೆ ಮರಳಿ ಬರುತ್ತೇನೆ, ಮರೆಯಬೇಡ.'

ಹ್ಯಾರಿಸನ್ ಮಾತನಾಡಲು ಬಾಯಿ ತೆಗೆದ. ಆದರೆ ಪ್ವರೊ ಅವನಿಗೆ ಅವಕಾಶ ಕೊಡಲಿಲ್ಲ. 'ನೀನು ಏನು ಹೇಳುತ್ತೀಯಾ ಎಂದು ನನಗೆ ಗೊತ್ತು. ಲ್ಯಾಂಗ್ಟನ್ ಈ ರೀತಿ ಮಾಡುವುದಿಲ್ಲ, ಅದು ಇದು. ಹ್ಞಾ, ಲ್ಯಾಂಗ್ಟನ್ ಎಂದಿಗೂ ಮಾಡುವುದಿಲ್ಲ! ನೀನು ಏನೇ ಹೇಳಿದರೂ ನಾನು ಒಂಬತ್ತು ಗಂಟೆಗೆ ತಪ್ಪದೇ ಬರುತ್ತೇನೆ. ಕಣಜದ ಗೂಡು ನಾಶವಾಗುವುದನ್ನು ನೋಡುವುದು ನನಗೆ ಮಜ ಕೊಡುತ್ತದೆ ಎಂದೇ ಅಂದುಕೊ. ಏನೇ ಆದರೂ ಇಂಗ್ಲೀಷರ ಇನ್ನೊಂದು ಕ್ರೀಡೆಯಲ್ಲವೇ ಅದು!'

ಅವನ ಉತ್ತರಕ್ಕೆ ಕಾಯದೆ, ಕಿರುಗುಟ್ಟುವ ಬಾಗಿಲಿನ ಮೂಲಕ ದೊಡ್ಡ ಹೆಜ್ಜೆಹಾಕುತ್ತ ಹೋದ. ರಸ್ತೆಗೆ ಬಂದ ಕೂಡಲೇ ಅವನ ವೇಗ ಕಡಿಮೆಯಾಯಿತು. ಅವನ ಚುರುಕುತನ ಅಳಿಯಿತು. ಅವನ ಮುಖದಲ್ಲಿ ಅಶಾಂತಿ ಮತ್ತು ಕಳವಳ ಕಾಣಿಸಿದವು. ಗಡಿಯಾರವನ್ನು ಜೇಬಿನಿಂದ ತೆಗೆದು ನೋಡಿದ. ಎಂಟು ಗಂಟೆ ಹತ್ತು ನಿಮಿಷವಾಗಿತ್ತು. 'ಮುಕ್ಕಾಲು ಗಂಟೆಗಿಂತ ಹೆಚ್ಚು ಸಮಯವಿದೆ', ಅವನು ಪಿಸುಗುಟ್ಟುವುದನ್ನು ಮುಂದುವರೆಸಿದ, 'ಅಲ್ಲೇ ಕಾದಿದ್ದರೆ